**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಳಂದೂರು.**

# CC 71/2025

ಪಿರ್ಯಾದಿ : ರಾಜ್ಯದ ಪರವಾಗಿ ಸಂತೇಮರಹಳ್ಳಿ ಪೊಲೀಸ್ ಠಾಣೆ

**ವಿರುದ್ಧ**

ಆರೋಪಿ : ಮಹದೇವಸ್ವಾಮಿ ಆಲಿಯಾಸ್ ಪಾಪಣ್ಣ, 52 ವರ್ಷ,
ಉಮ್ಮತ್ತೂರು ಗ್ರಾಮ, ಚಾಮರಾಜನಗರ ತಾಲ್ಲೂಕು,
ಚಾಮರಾಜನಗರ ಜಿಲ್ಲೆ.

## :ಆಪಾದನಾ ನೀಡಿಕೆ:

ಶ್ರೀ ಸುಜಾತ ಹೆಚ್, ಎಲ್,ಎಲ್,ಎಂ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಯಳಂದೂರು ಆದ ನಾನು ನಿನ್ನನ್ನು ಈ ಕೆಳಕಂಡ ಆರೋಪಗಳಿಗೆ ಗುರಿಪಡಿಸುತ್ತೇನೆ.

ದಿನಾಂಕ: 31.01.2025ರಂದು ಮದ್ಯಾಹ್ನಃ 3.45 ಗಂಟೆ ಸಮಯದಲ್ಲಿ ಸಂತೇಮರಹಳ್ಳಿ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಹೆಗ್ಗವಾಡಿಪುರ ಗೇಟಿನ ಬಳಿ ಸಂತೇಮರಹಳ್ಳಿ-ಕುದೇರು ಸಾರ್ವಜನಿಕ ರಸ್ತೆಯಲ್ಲಿ, ಆರೋಪಿಯಾದ ನೀನು ಕಾನೂನು ಬಾಹಿರವಾಗಿ ಯಾವುದೇ ರಹದಾರಿಯಿಲ್ಲದೆ ಅಕ್ರಮವಾಗಿ ಅಬಕಾರಿ ಕಾಯ್ದೆಯನ್ನು ಉಲ್ಲಂಘನೆ ಮಾಡಿ ಒಂದು ಹಸಿರು ಬಣ್ಣದ ಬ್ಯಾಗಿನಲ್ಲಿ ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳನ್ನು ಇಟ್ಟುಕೊಂಡು ಕೈಯಲ್ಲಿ ಪ್ಲಾಸ್ಟಿಕ್ ಲೋಟಗಳನ್ನು ಹಿಡಿದುಕೊಂಡು ದಾರಿನಲ್ಲಿ ಓಡಾಡುವ ಜನರನ್ನು ಕೂಗಿ ಕರೆಯುತ್ತಾ ಮದ್ಯಪಾನ ಮಾಡಲು ಅವಕಾಶ ನೀಡುತ್ತಿದ್ದ ಈ ಕ್ರಮವು ಕರ್ನಾಟಕ ಅಬಕಾರಿ ಕಾಯಿದೆ ಕಲಂ. 15(ಎ) ಮತ್ತು 32(3) ರ ಅಡಿಯಲ್ಲಿ ಅಪರಾಧ ಎಸಗಿರುವುದಾಗಿ ಆರೋಪಿಸಲಾಗಿದೆ.

ಪ್ರಶ್ನೆ: 1: ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೆ?

ಉತ್ತರ:

ಪ್ರಶ್ನೆ: 2: ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪ್ರತಿವಾದ ಇದೆಯೆ?

ಉತ್ತರ:

ಮೇಲೆ ಪಡೆದ ಆರೋಪಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನಗೆ ಸ್ವತಃ ಹೇಳುವ ಹಾಗೆ ಪಡೆಯಲಾಗಿದ್ದು ಆರೋಪಿಯು ನುಡಿದ ಪೂರ್ಣ ಹಾಗೂ ಸತ್ಯವಾದ ಹೇಳಿಕೆಯನ್ನು ಈ ಬರಹವು ಒಳಗೊಂಡಿದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

ದಿನಾಂಕಃ 17.07.2026.

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಯಳಂದೂರು.